# S.S.C. EXAMINATIONS - FIRST LANGUAGE [KANNADA]

# BLUE PRINT FOR MODEL PAPER 2023-2024

**SUBJCT : KANNADA  MAX.MARKS 100  TIME : 3 Hrs.15 Mins.**

**[FIRST LANGUAGE] <u>01 K & 02 K</u>**

## I. ವಿದ್ಯಾ ಪ್ರಮಾಣಗಳು–ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ವಿದ್ಯಾ ಪ್ರಮಾಣಗಳು | ಅಂಕಗಳು | ಶೇಕಡಾ |
|---|---|---|---|
| 1. | ಅವಗಾಹನೆ – ಪ್ರತಿಸ್ಪಂದನೆ | 32 | 32% |
| 2. | ವ್ಯಕ್ತೀಕರಣ – ಸೃಜನಾತ್ಮಕತೆ | 36 | 36% |
| 3. | ಭಾಷಾಂಶಗಳು | 32 | 32% |
| | ಮೊತ್ತ.. | 100 | 100% |

## II. ಪಾಠ್ಯ ಭಾರತ್ವ ಪಟ್ಟಿಕೆ / ವಿಷಯ ರೂಪ ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ಪಾಠ್ಯಾಂಶಗಳು / ವಿಷಯ | ಅಂಕಗಳು | ಶೇಕಡಾ |
|---|---|---|---|
| 1. | ಪದ್ಯ | 20 | 20% |
| 2. | ಗದ್ಯ [ಪರಿಚಿತ, ಅಪರಿಚಿತ ಗದ್ಯ ಸೇರಿಸಿ] | 20 | 20% |
| 3. | ಪಠ್ಯ ಪೂರಕ ಅಧ್ಯಯನ [Non detail] | 20 | 20% |
| 4. | ಪದ್ಯ / ಗದ್ಯದಿಂದ ಸೃಜನಾತ್ಮಕ ಪ್ರಶ್ನೆ | 08 | 8% |
| 5. | ಭಾಷಾಂಶಗಳು | 32 | 32% |
| | ಮೊತ್ತ.. | 100 | 100% |

## ಪ್ರಶ್ನಾನುರೂಪ ಭಾರತ್ವ ಪಟ್ಟಿಕೆ

| ಕ್ರಮ ಸಂಖ್ಯೆ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳ ಸಂಖ್ಯೆ | ಅಂಕಗಳು | ಮೊತ್ತ ಅಂಕಗಳು | ಶೇಕಡಾ |
|---|---|---|---|---|---|
| 1. | ವ್ಯಾಸರೂಪ ಪ್ರಶ್ನೆಗಳು | 07 | 08 | 56 | 56% |
| 2. | ಲಘು ಪ್ರಶ್ನೆಗಳು | 03 | 04 | 12 | 12% |
| 3. | ಅತಿ ಲಘು ಪ್ರಶ್ನೆಗಳು | 09 | 02 | 18 | 18% |
| 4. | ಲಕ್ಷ್ಯಾತ್ಮಕ ಪ್ರಶ್ನೆಗಳು | 14 | 01 | 14 | 14% |
| | ಮೊತ್ತ.. | 33 | | 100 | 100% |

**KANNADA PAPER-I & II    01 K & 02 K**
**[FIRST LANGUAGE]   S.S.C. PUBLIC EXAMINATIONS**
ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ–2024

**TIME – 3 HOURS, 15 MINUTES.                                   MAX.MARKS-100**

**ವಿದ್ಯಾರ್ಥಿಗಳಿಗೆ ಸೂಚನೆಗಳು**

1. ಪ್ರಶ್ನೆ ಪತ್ರಿಕೆಯಲ್ಲಿ ಮೂರು ವಿಭಾಗಗಳು ಇರುತ್ತವೆ.
2. ಪ್ರಶ್ನೆ ಪತ್ರಿಕೆ ಓದುವುದಕ್ಕೆ 15 ನಿಮಿಷಗಳು, ಉತ್ತರ ಬರೆಯುವುದಕ್ಕೆ 3 ಗಂಟೆಗಳ ಸಮಯ ಕೊಡಲಾಗಿದೆ.
3. ಎಲ್ಲಾ ಪ್ರಶ್ನೆಗಳ ಉತ್ತರಗಳು ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು.
4. ಉತ್ತರಗಳು ದುಂಡಾಗಿ, ಸ್ಪಷ್ಟವಾಗಿ ಬರೆಯಬೇಕು.

---

## ವಿಭಾಗ–I

**I. ಅವಗಾಹನೆ–ಪ್ರತಿಸ್ಪಂದನೆ (32 ಅಂಕಗಳು)**

1. ಈ ಕೆಳಗಿನ ಪರಿಚಿತ ಪದ್ಯಗಳಲ್ಲಿ ಒಂದನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ.   8 ಅಂಕ

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.

**ಪ್ರಶ್ನೆಗಳು**

ಅ) ನದೀಜಲಗಳು ಏನಾಗಿವೆ?
ಆ) ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
ಇ) ಕಾಡುಮೇಡುಗಳ ಸ್ಥಿತಿ ಹೇಗಿದೆ?
ಈ) ಈ ಸಾಲುಗಳು ಯಾವ ಪದ್ಯದಿಂದ ಬಂದಿವೆ ?

(ಅಥವಾ)

ನೀಲಮೇಘ ಮಂಡಲ–ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

–ದ.ರಾ. ಬೇಂದ್ರೆ

ಉ) ಹಕ್ಕಿಯು ಯಾವುದರ ಸಂಕೇತವಾಗಿದೆ?

ಊ) ಹಕ್ಕಿಯ ಕಣ್ಣುಗಳಾವುವು ?

ಋ) ಹಕ್ಕಿ ಹಾರುತಿದೆ ನೋಡಿದಿರಾ? ಎಂದವರ್‍ಯಾರು?

ಋ) ಹಕ್ಕಿಯ ರೆಕ್ಕೆಯು ಎಲ್ಲಿಯವರೆಗೆ ಮೂಡಿತು?

2. ಕೆಳಗಿನ ಪರಿಚಿತ ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. (8 ಅಂಕ)

ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ನೇತಾರರಾಗಿ 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ಬೆಳೆದ ವಿಶ್ವೇಶ್ವರಯ್ಯ ಅವರಿಗೆ ಬ್ರಿಟೀಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ಹಲವು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದವು. ಇವರ ಶತಮಾನೋತ್ಸವ ನೆನಪಿಗಾಗಿ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಲಾಯಿತು. ಮೆಮೊರೀಸ್ ಆಫ್ ಮೈ ವರ್ಕಿಂಗ್ ಲೈಫ್, ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ ಇವರ ಕೃತಿಗಳು. ಇವರ ಹುಟ್ಟು ಹಬ್ಬದ ನೆನಪಿಗಾಗಿ ಎಂಜಿನಿಯರ್ಸ್ ದಿನಾಚರಣೆ ಮಾಡಲಾಗುತ್ತಿದೆ.

ಪ್ರಶ್ನೆಗಳು :

ಅ) ವಿಶ್ವೇಶ್ವರಯ್ಯನವರಿಗೆ ಬ್ರಿಟೀಷ್ ಸರ್ಕಾರ ನೀಡಿದ ಪದವಿ ಯಾವುದು?

ಆ) ವಿಶ್ವೇಶ್ವರಯ್ಯನವರಿಗೆ ದೊರೆತ ಅತ್ಯುನ್ನತ ಪ್ರಶಸ್ತಿ ಯಾವುದು?

ಇ) ಅಂಚೆಚೀಟಿ ಏಕೆ ಬಿಡುಗಡೆ ಮಾಡಲಾಯಿತು?

ಈ) ವಿಶ್ವೇಶ್ವರಯ್ಯನವರ ಕೃತಿಗಳು ಯಾವುವು?

**೩. ಕೆಳಗಿನ ವಾಕ್ಯಗಳನ್ನು ಸಂಘಟನಾ ಕ್ರಮದಲ್ಲಿ ಬರೆಯಿರಿ (೮ ಅಂಕ)**

ಅ) 1957 ರಲ್ಲಿ ಬೀದರಿನಲ್ಲಿ ಜನಿಸಿದರು.
ಆ) ಇವರಿಗೆ ರತ್ನಮ್ಮ ಹೆಗಡೆ ಬಹುಮಾನ, ಅತ್ತಿಮಬ್ಬೆ ಪ್ರಶಸ್ತಿ, ಮೈಸೂರಿನ ಸಾಹಿತ್ಯ ಪ್ರಶಸ್ತಿ ಪುರಸ್ಕಾರಗಳು ಬಂದಿವೆ.
ಇ) ಮುಗಿಲ ಮಲ್ಲಿಗೆ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
ಈ) ಉರಿಲಿಂಗ, ಹೂವಿನ ತೇರನೇರಿ, ಜ್ವಲಂತ, ಲಕ್ಷಣ ರೇಖೆ ದಾಟಿದವರು ಇತ್ಯಾದಿ.

4. ಈ ಕೆಳಗಿನ ಅಪರಿಚಿತ ಗದ್ಯ ಓದಿ ಪ್ರಶ್ನೆಗಳಿಗೆ ಉತ್ತರಿಸಿ. (೮ ಅಂಕ)

ಜಗತ್ತು ಪೂಜಿಸುವುದು ಶಕ್ತಿಯನ್ನು ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಕ್ರಿಕೆಟ್ ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಯುವಕರು ಚಪ್ಪಾಳೆತಟ್ಟಿ ಹುಚ್ಚೆದ್ದು ಕುಣಿದು ಅವನನ್ನು ಹೆಗಲ ಮೇಲೇರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ ಅದು ಅವನ ಶಕ್ತಿಸಾಮರ್ಥ್ಯ. ಶಕ್ತಿಯನ್ನು ಎಲ್ಲರೂ ಭಕ್ತಿ ಗೌರವಗಳಿಂದ ನೋಡುತ್ತಾರೆ. 'ಶಕ್ತನಾದರೆ ನೆಂಟರೆಲ್ಲಾ ಹಿತರು, ಅಶಕ್ತನಾದರೆ ಆಪ್ತ ಜನರೇ ವೈರಿಗಳು' ಎಂದು ಪುರಂದರ ದಾಸರು ಹೇಳಿದ ಮಾತು ಸತ್ಯ. ಸ್ವಾಮಿ ವಿವೇಕಾನಂದರು ಹೇಳಿದಂತೆ 'ಶಕ್ತಿಯೇ ಜೀವನ ದುರ್ಬಲತೆಯೇ ಮರಣ' ಇದೊಂದು ದೊಡ್ಡ ಸತ್ಯ. ಮಹಾ ಭಾರತ ಯುದ್ಧದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ನಿರ್ವೀರ್ಯನಾಗಬೇಡ, ದುರ್ಬಲನಾಗಬೇಡ ಎಂದು ಬೋಧಿಸಿದ.

**ಪ್ರಶ್ನೆಗಳು**

ಅ) ಯುವಕರು ಸರಿಯಾಗಿ ತಿಳಿದಿರಬೇಕಾದುದು ಏನು?

ಆ) ಶಕ್ತಿಯ ಬಗೆಗೆ ಪುರಂದರ ದಾಸರು ಏನು ಹೇಳಿದ್ದಾರೆ?

ಇ) 'ಶಕ್ತಿಯೇ ಜೀವನ' ದುರ್ಬಲತೆಯೇ ಮರಣ ಎಂದವರ್‍ಯಾರು?

ಈ) ಮಹಾಭಾರತ ಯುದ್ಧದಲ್ಲಿ ಶ್ರೀ ಕೃಷ್ಣನಿಂದ ಬೋಧಿಸಲ್ಪಟ್ಟವರು ಯಾರು?

**ವಿಭಾಗ – II**

**II ವ್ಯಕ್ತೀಕರಣ – ಸೃಜನಾತ್ಮಕತೆ (36 ಅಂಕಗಳು)**

ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿ. 3X4=12

5. ಹಸುರು ಪದ್ಯ ಭಾಗದಿಂದ ಕವಿ ಕುವೆಂಪು ಇವರ ಪರಿಚಯ ಮಾಡಿರಿ.
6. ಋಣಕ್ಕೂ ಧರ್ಮಕ್ಕೂ ಇರುವ ಸಂಬಂಧವೇನು?
7. ಭಗತ್ ಸಿಂಗ್ ನ ಸಹಚರರು ಯಾರು?

ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ 3X8=24

8. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?

(ಅಥವಾ)

ಲವನ ನಡುವಳಿಕೆ ಮೆಚ್ಚುಗೆಯಾಯಿತೇ ? ಏಕೆ ?

9. 'ವಸಂತ ಮುಖ ತೋರಲಿಲ್ಲ' ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

(ಅಥವಾ)

ಸಾಮಾಜಿಕ ಧಾರ್ಮಿಕ ಸುಧಾರಕರಾದ ಶ್ರೀ ನಾರಾಯಣಗುರು ಇವರ ಧರ್ಮ ಪರಿಪಾಲನಾಯೋಗಂ ಕುರಿತು ಬರೆಯಿರಿ.

10. ನಿಮ್ಮ ಬೀದಿಗೆ ದಾರಿದೀಪ ಹಾಕಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.

(ಅಥವಾ)

'ಕೈ ಕೆಸರಾದರೆ ಬಾಯಿ ಮೊಸರು' – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

**<u>ವಿಭಾಗ – III</u>**

**III <u>ಪದಜಾಲ</u> – ವ್ಯಾಕರಣಾಂಶಗಳು (32 ಅಂಕಗಳು)**

**<u>ಭಾಷಾಂಶಗಳು</u>**

**ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರಿಸಿ.** 9X2=18 **ಅಂಕ**

11. **ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ**
**(ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಬರೆಯಿರಿ)** 1X2=2

12. ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರು ಬರೆಯಿರಿ. **1X2=2**

ಪುಟ್ಟಿದ ನೂರ್ವರು ಮೆನ್ನೊಡ
ಹುಟ್ಟಿದ ನೂರ್ವರು ಮಿದಿರ್ಚಿ ಸತ್ತೊಡೆ ಕೋಪಂ.

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರ ಬರೆಯಿರಿ.

13. ಅ) ಲವನು ಯಜ್ಞಾಶ್ವವನ್ನು <u>ಕದಳ</u> ಮರಕ್ಕೆ ಕಟ್ಟಿದನು.
(ಗೆರೆ ಎಳೆದ ಪದದ ಅರ್ಥ ಬರೆಯಿರಿ)

ಆ) ಪ್ರೀತಿಯ <u>ಹಣತೆಯ</u> <u>ಹ</u>ಚ್ಚೋಣ 2 ಅಂಕ
(ಗೆರೆ ಎಳೆದ ಪದಕ್ಕೆ ಅರ್ಥ ಗುರ್ತಿಸಿ ಬರೆಯಿರಿ)
ಅ) ಹಣ ಆ) ನೈವೇದ್ಯ ಇ) ದೂಪ ಈ ದೀಪ

14. ಅ) ಜನಕ ಮಹಾರಾಜನಿಗೆ ಸೀತೆ <u>ಭೂಮಿ</u>ಯಲ್ಲಿ ದೊರೆತಳು.
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಬರೆಯಿರಿ)

ಆ) <u>ಹುಸಿ</u>ಯ ನುಡಿಯಲು ಬೇಡ.
(ಗೆರೆ ಎಳೆದ ಪದಕ್ಕೆ ಸಮಾನಾರ್ಥಕ ಪದಗಳು ಗುರ್ತಿಸಿ ಬರೆಯಿರಿ) 2 ಅಂಕ
ಅ) ಸತ್ಯ, ನಿಜ, ಆ) ಸತ್ಯ, ಸುಳ್ಳು ಇ) ಅಸತ್ಯ, ದಿಟ,
ಈ) ಸುಳ್ಳು, ಅಸತ್ಯ.

15. ಅ) ಮೈಸೂರು ಒಡೆಯರಲ್ಲಿ ನಾಲ್ವಡಿ ಕೃಷ್ಣ ರಾಜನ್ ಪ್ರಮುಖರು.
(ಗೆರೆ ಎಳೆದ ಪದಕ್ಕೆ ತದ್ಭವ ಬರೆಯಿರಿ).

ಆ) ವಿದ್ಯೆಗೆ ವಿನಯವೇ ಭೂಷಣ 2 ಅಂಕ
(ಗೆರೆ ಎಳೆದ ಪದದ ತದ್ಭವ ಗುರ್ತಿಸಿ ಬರೆಯಿರಿ).
ಅ) ಬಿಜ್ಜೆ ಆ) ಬಿದ್ದೆ ಇ) ಪ್ರತಿಭೆ ಈ) ಜ್ಞಾನ

16. ಅ) ತಿರುಪತಿ ಲಡ್ಡು ಹಸಾದ ಬಹಳ ರುಚಿಯಾಗಿರುತ್ತದೆ.
(ಗೆರೆ ಎಳೆದ ಪದದ ತತ್ಸಮ ಬರೆಯಿರಿ)

ಆ) ಶಬರಿಗೆ ರಾಮನಲ್ಲಿ ಅಪಾರವಾದ ಬಕುತಿ ಇತ್ತು. 2 ಅಂಕ
(ಗೆರೆ ಎಳೆದ ಪದದ ತತ್ಸಮ ಗುರ್ತಿಸಿ ಬರೆಯಿರಿ)
ಅ) ಯುಕ್ತಿ, ಆ) ಪ್ರೀತಿ ಇ) ರಕ್ತಿ ಈ) ಭಕ್ತಿ

17. ನಾಯಿಯನ್ನು ಕಂಡು ನರಿಯು ಕಾಲಿಗೆ ಬುದ್ಧಿ ಹೇಳುವಂತಾಯಿತು. 2 ಅಂಕ
(ಈ ವಾಕ್ಯದಲ್ಲಿರುವ ನುಡಿಗಟ್ಟನ್ನು ಗುರ್ತಿಸಿ ಬರೆಯಿರಿ)

18. ರಾಮರಾಜ್ಯ – ಈ ನುಡಿಗಟ್ಟನ್ನು ಯಾವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. 2 ಅಂಕ

19. ಮೂಗು ತೂರಿಸು – ಈ ನುಡಿಗಟ್ಟನ್ನು ಉಪಯೋಗಿಸಿ ಸ್ವಂತ ವಾಕ್ಯ ಬರೆಯಿರಿ. 2 ಅಂಕ

ಕೆಳಗಿನ ಪ್ರಶ್ನೆಗಳಿಗೆ ಸೂಚಿಸಿದ ವಿಧವಾಗಿ ಉತ್ತರಿಸಿರಿ. 14X1=14 ಅಂಕ.

20. ವಿದ್ಯಾರ್ಥಿಗಳು ಗುರೂಪದೇಶವನ್ನು ಮೀರಬಾರದು. (1 ಅಂಕ)
(ಗೆರೆ ಎಳೆದ ಪದವನ್ನು ಬಿಡಿಸಿ ಬರೆಯಿರಿ).

21. ಹೊಳೆಯು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. (1 ಅಂಕ)
(ಗೆರೆ ಎಳೆದ ಪದಕ್ಕೆ ಸಂಧಿ ಗುರ್ತಿಸಿ ಬರೆಯಿರಿ).
(ಅ) ಆಗಮ ಸಂಧಿ (ಆ) ಆದೇಶ ಸಂಧಿ
(ಇ) ಸುವರ್ಣದೀರ್ಘಸಂಧಿ (ಈ) ಗುಣ ಸಂಧಿ

22. ಏಕ+ಏಕ ಈ ಪದವನ್ನು ಕೂಡಿಸಿ ಬರೆಯಿರಿ. 1 ಅಂಕ

23. ಹನುಮ ಭೀಮರಾಮ ಬ್ರಿಟೀಷ್ ಸೈನಿಕರೊಂದಿಗೆ ಹೋರಾಡಿದರು. 1 ಅಂಕ
(ಗೆರೆ ಎಳೆದ ಪದಕ್ಕೆ ವಿಗ್ರಹವಾಕ್ಯ ಬರೆಯಿರಿ).

24. <u>ಒಗ್ಗಟ್ಟಿನಲ್ಲಿ</u> ಬಲವಿದೆ. 1 ಅಂಕ
(ಗೆರೆ ಎಳೆದ ಪದದ ಸಮಾಸ ಬರೆಯಿರಿ).

25. ಕರ್ಮಧಾರಯ ಸಮಾಸಕ್ಕೆ ಉದಾಹರಣೆ ಗುರ್ತಿಸಿ ಬರೆಯಿರಿ. 1 ಅಂಕ
(ಅ) ಕಂಗೆಡು (ಆ) ಹೊಸಗನ್ನಡ (ಇ) ತಲೆನೋವು
(ಈ) ಆಕಲ್ಲು.

26. 'ಅರಸುಗಳ ವಾಜಿಯಂ ಬಿಡು' – ಈ ವಾಕ್ಯಕ್ಕೆ ಹೊಸಗನ್ನಡ ರೂಪ ಗುರ್ತಿಸಿ ಬರೆಯಿರಿ. 1 ಅಂಕ
ಅ) ರಾಜರ ಆನೆಯನ್ನು ಬಿಡು.
ಆ) ರಾಜರ ಕುದುರೆಯನ್ನು ಬಿಡು
ಇ) ರಾಜರ ಆಳುಗಳನ್ನು ಕಟ್ಟು.
ಈ) ರಾಜರ ಕುದುರೆಯನ್ನು ಓಡಿಸು.

27. ರಾಮನು ಒಳ್ಳೆಯ ಬಾಲಕನಾಗಿದ್ದಾನೆ. 1 ಅಂಕ
(ಈ ವಾಕ್ಯಕ್ಕೆ ವಿರುದ್ಧಾರ್ಥಕ ವಾಕ್ಯ ಬರೆಯಿರಿ).

28. ಕೆಳಗಿನ ಪದಗಳಲ್ಲಿ ನಿಷೇಧಾರ್ಥಕ ಕ್ರಿಯಾಪದ ಗುರ್ತಿಸಿ ಬರೆಯಿರಿ. 1 ಅಂಕ
ಕೇಳಲಿ, ಕೇಳಿಯಾನು, ಕೇಳನು, ಕೇಳುವನು.

29. ಗುರುಗಳು ಪಾಠವನ್ನು ಹೇಳಿದರು. 1 ಅಂಕ
(ಈ ಕರ್ತರಿ ವಾಕ್ಯವನ್ನು ಕರ್ಮಣಿ ವಾಕ್ಯವಾಗಿ ಬದಲಿಸಿ ಬರೆಯಿರಿ).

30. ರಾಮ ರಾವಣನ್ನು ಕೊಂದನು. 1 ಅಂಕ
(ಈ ವಾಕ್ಯವನ್ನು ಕರ್ಮಣಿ ವಾಕ್ಯವಾಗಿ ಮಾಡಿದಾಗ ಈ ರೀತಿ ಇರುತ್ತದೆ).
ರಾಮನಿಂದ ರಾವಣನು ____________ಬಿಟ್ಟ ಸ್ಥಳ ತುಂಬಿರಿ.

31. ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ. 1 ಅಂಕ
(ಇದು ಎಂತಹ ವಾಕ್ಯ ಬರೆಯಿರಿ).

32. ಆಹಾ! ಅವನು ಗುರಿ ತಲುಪಿದ! 1 ಅಂಕ
(ಇದು ಯಾವ ವಾಕ್ಯ ಬರೆಯಿರಿ).

33. ವೈದ್ಯರು ರೋಗಿಯನ್ನು ಪರೀಕ್ಷಿಸಿದರು. ಆದರೆ ಅವರು ಔಷಧಿಯನ್ನು ಕೊಡಲಿಲ್ಲ. 1 ಅಂಕ
(ಇದು ಎಂತಹ ವಾಕ್ಯ ಗುರ್ತಿಸಿ ಬರೆಯಿರಿ).
ಅ) ಸಾಮಾನ್ಯವಾಕ್ಯ ಆ) ಮಿಶ್ರವಾಕ್ಯ ಇ) ಸಂಯೋಜಿತವಾಕ್ಯ
ಈ) ಪ್ರಶ್ನಾರ್ಥಕವಾಕ್ಯ.

**10 ನೇ ತರಗತಿ – ಪ್ರಥಮ ಭಾಷೆ – ಕನ್ನಡ ಬ್ಲೂ ಪ್ರಿಂಟ್ [ನೀಲ ನಕ್ಷೆ] 2023-2024**

## 01 K & 02 K KANNADA

| ಕ್ರಮ ಸಂಖ್ಯೆ | ಪಾಠ್ಯಾಂಶಗಳು | ಅವಗಾಹನೆ – ಪ್ರತಿ ಸ್ಪಂದನೆ 32 ಅಂಕಗಳು | | | ವ್ಯಕ್ತೀಕರಣ– ಸೃಜನಾತ್ಮಕತೆ 36 ಅಂಕಗಳು | | | ಭಾಷಾಂಶಗಳು 32 ಅಂಕಗಳು | | | ಮೊತ್ತ | | | |
|---|---|---|---|---|---|---|---|---|---|---|---|---|---|---|
| | | ವ್ಯಾಸ | ಲಘು | ಲಕ್ಷ್ಯ | ವ್ಯಾಸ | ಲಘು | ಲಕ್ಷ್ಯ | ಲಘು | ಅತಿ ಲಘು | ಲಕ್ಷ್ಯ | ವ್ಯಾಸ | ಲಘು | ಅತಿ ಲಘು | ಲಕ್ಷ್ಯಾತ್ಮಕ |
| 1. | ಪದ್ಯ | (08)1 | | | (8)1 | (4)1 | | | | | (8)2 | (4)1 | | |
| 2. | ಗದ್ಯ | (8)2 | | | | (4)1 | | | | | (8)2 | (4)1 | | |
| 3. | ಪಠ್ಯ ಪೂರಕ ಅಧ್ಯಯನ | (8)1 | | | (8)1 | (4)1 | | | | | (8)2 | (4)1 | | |
| 4. | ಪದ್ಯ / ಗದ್ಯ ದಿಂದ ಸೃಜನಾತ್ಮಕ ಪ್ರಶ್ನೆ | | | | (8)1 | | | | | | (8)1 | | | |
| 5. | ಭಾಷಾಂಶಗಳು | | | | | | | | (2)9 | (1)14 | | | (2)9 | (1)14 |
| | ಮೊತ್ತ... | 32 | | | 24 | 12 | | | 18 | 14 | 56 | 12 | 18 | 14 |

**ಸೂಚನೆ : ಬ್ರಾಕೆಟ್ ಒಳಗಿನ ಅಂಕೆ ಅಂಕಗಳನ್ನು, ಹೊರಗಿನ ಸಂಖ್ಯೆ ಪ್ರಶ್ನೆಗಳನ್ನು ಸೂಚಿಸುತ್ತದೆ.**